ಶ್ರೀ ಬಿ.ರಮಾನಾಥ್ ರೈ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ "ಮಗುವಿಗೊಂದು ಮರ, ಶಾಲೆಗೊಂದು ವನ" ಎಂದು ಹೇಳುವ ಒಂದು ಕಾರ್ಯಕ್ರಮ ಹಮ್ಮಿಕೊಂಡಿದ್ದು, ಸಾಕಷ್ಟು ಗಿಡಗಳನ್ನು ಶಾಲೆಗಳಲ್ಲಿ ಮಕ್ಕಳ ಮೂಲಕ ನೆಡತಕ್ಕಂತಹ ಕೆಲಸಕ್ಕೆ ಈಗಾಗಲೇ ಒದಗಿಸಲಾಗಿದೆ. ಶಾಲೆಗಳಿಗೆ ಗಿಡಗಳನ್ನು ನೆಡಲಿಕ್ಕೆ ಸಸಿಗಳನ್ನು ಕೊಟ್ಟು ಸಾಕಷ್ಟು ಶಾಲೆಗಳಲ್ಲಿ ಒಳ್ಳೆಯ ರೀತಿಯಲ್ಲಿ ಗಿಡಗಳನ್ನು ನೆಟ್ಟು ಪೋಷಣೆ ಮಾಡತಕ್ಕಂತಹ ಕೆಲಸವಾಗಿದೆ. ಶಾಸಕರು ತಮಗೆ ಕೊಟ್ಟಿರುವ ಅನುದಾನ ಕಡಿಮೆ ಎನ್ನುವ ಮಾತನ್ನು ಹೇಳಿದ್ದಾರೆ. ಯಥಾವತ್ತಾಗಿ ಏನು ಕಾರ್ಯಕ್ರಮವಿದೆ ಅದನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಮಾಡಲಿಕ್ಕೆ ಸೂಕ್ತ ಕ್ರಮವನ್ನು ನಾವು ಕೈಗೊಳ್ಳುತ್ತೇವೆ.

ಶ್ರೀ ಸುಧಾಕರ ಲಾಲ್ ಪಿ.ಆರ್.: ಮಾನ್ಯ ಅಧ್ಯಕ್ಷರೆ, ಈಗ ಯೋಜನೆ ಪ್ರಾರಂಭವಾದಾಗ 29.82 ಲಕ್ಷ ಸಸಿಗಳನ್ನು ಬೆಳೆಸುತ್ತಾರೆ. ಆದರೆ, ಈ ಕೇವಲ 7.96 ಲಕ್ಷ ಸಸಿಗಳನ್ನು ಬೆಳೆಸಿದ್ದಾರೆ. ಇವತ್ತಿನವರೆಗೂ ಕೂಡ ಅವು ಶಾಲೆಗಳನ್ನು ತಲುಪಿಲ್ಲ. ಅದು ತಲುಪದೇ ಇರುವುದಕ್ಕೆ ಕಾರಣವೇನೆಂದರೆ, ಅನುದಾನವಿಲ್ಲ, ಅದನ್ನು ಹಂಚಿಕೆ ಮಾಡುವುದಕ್ಕೆ ದುಡ್ಡಿಲ್ಲವೆನ್ನುವ ಮಾತನ್ನು ಎಲ್ಲಾ ಕಡೆ ಹೇಳುತ್ತಿದ್ದಾರೆ. ಹಾಗಾಗಿ ಬೆಳೆಸಿರುವ ಸಸಿಗಳನ್ನು ಶಾಲೆಗಳಿಗೆ ತಲುಪಿಸುತ್ತೀರಿ ಯಾವಾಗ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕಾಗುತ್ತದೆ.

ಶ್ರೀ ಬಿ.ರಮಾನಾಥ್ ರೈ : ಮಾನ್ಯ ಅಧ್ಯಕ್ಷರೆ, ಶಾಸಕರು ಅನುದಾನ ಕೊರತೆಯಿದೆ ಎಂದು ಅಲ್ಲಿ ಹೇಳುತ್ತಾರೆ ಎನ್ನುವ ಮಾತನ್ನು ಹೇಳುತ್ತಾರೆ. ತಮ್ಮ ಮಾತನ್ನು, ತಮ್ಮ ವಿಚಾರವನ್ನು ಅರ್ಥ ಮಾಡಿಕೊಂಡು ಏನು ಸಮಸ್ಯೆಯಿದೆ ಅದಕ್ಕೆ ಅನುದಾನ ಒದಗಿಸುವಂತಹ ಕೆಲಸವನ್ನು ನಾವು ಮಾಡುತ್ತೇವೆ.

ಅಧ್ಯಕ್ಷರು: ಮಾನ್ಯ ಸಚಿವರೆ, ಹೆಚ್ಚಿಗೆ ಅನುದಾನ ಕೊಡುತ್ತೇನೆ ಎಂದು ಹೇಳಿದರೆ ಆಯಿತು. ಹೆಚ್ಚು ಎಂದು ಪದ ಸೇರಿಸಿ ಎಂದು ಹೇಳುತ್ತಾರೆ.

ಶ್ರೀ ಬಿ.ರಮಾನಾಥ್ ರೈ : ಈಗ ನಿಮಗೆ ಏನು ಅನುದಾನದ ಅಗತ್ಯವಿದೆ ಅದನ್ನು ಒದಗಿಸಲಿಕ್ಕೆ ನಾನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು : O.K.

ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಪರಿಷ್ಕರಿಸುತ್ತಾರೆ.

ಅರಣ್ಯ ಇಲಾಖೆಯಿಂದ ನೋಟಿಸ್ ಜಾರಿಗೊಳಿಸಿರುವುದು

09(4) ಶ್ರೀ ಬೋಪಯ್ಯ ಕೆ.ಜಿ. (ವಿರಾಜಪೇಟೆ):– ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಚೆಂಬು, ಸಂಪಾಜೆ ಗ್ರಾಮಗಳಲ್ಲಿ ತಲತಲಾಂತರದಲ್ಲಿ ಸರಕಾರಿ ಜಮೀನಿನಲ್ಲಿ ವಾಸಿಸುತ್ತಿರುವವರಿಗೆ ತಮ್ಮ ಸ್ವಾಧೀನದಲ್ಲಿರುವ ಜಮೀನನ್ನು ತೆರವುಗೊಳಿಸುವಂತೆ ಅರಣ್ಯ ಇಲಾಖೆಯಿಂದ ನೋಟಿಸು ಜಾರಿಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಏಕಾಏಕಿ ನೋಟಿಸು ನೀಡಲು ಕಾರಣವೇನು ; (ವಿವರಗಳನ್ನು ಒದಗಿಸುವುದು)

(ಇ) ಕೊಡಗು ಜಿಲ್ಲೆಯಲ್ಲಿ ಈ ಅರಣ್ಯ ಜಾಗ ಮತ್ತು ಕಂದಾಯ ಇಲಾಖಾ ಜಾಗವನ್ನು ಗುರುತಿಸಲು ಕ್ರಮ ಕೈಗೊಳ್ಳಲಾಗಿದೆಯೇ, ಹಾಗಿಲ್ಲದಿದ್ದಲ್ಲಿ ಕಾರಣಗಳೇನು ? (ವಿವರಗಳನ್ನು ಒದಗಿಸುವುದು)

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):–

(ಅ) ಹೌದು, ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ಚೆಂಬು, ಸಂಪಾಜೆ ಗ್ರಾಮಗಳಲ್ಲಿನ ಮೀಸಲು ಅರಣ್ಯ ಪ್ರದೇಶದಲ್ಲಿ ಅನಧಿಕೃತವಾಗಿ ಒತ್ತುವರಿ ಮಾಡಿರುವ ಪ್ರಕರಣಗಳಲ್ಲಿ ಒತ್ತುವರಿದಾರರಿಗೆ ನೋಟಿಸುಗಳನ್ನು ಜಾರಿ ಮಾಡಲಾಗಿರುತ್ತದೆ.

(ಆ) ಸಂಪಾಜೆ ಅರಣ್ಯ ವಲಯದ "ಪಟ್ಟಿಘಾಟ್ ಮೀಸಲು ಅರಣ್ಯಕ್ಕೆ" ಒಳಪಡುವ ಯು.ಚೆಂಬು, ಸಂಪಾಜೆ, ಮದೆ, ಗಾಳಿಬೀಡು, ದಬ್ಬಡ್ಕ ಗ್ರಾಮಗಳಲ್ಲಿ ಅನಧಿಕೃತ ಅಕ್ರಮ ಪ್ರವೇಶ ಮಾಡಿ ಸದರಿ ಭೂಮಿಯಲ್ಲಿರುವ ಮರಗಿಡಗಳನ್ನು ಕಡಿದು ಸಾಗುವಳಿ ಮಾಡುತ್ತಿದ್ದ ಕಾರಣ ಕರ್ನಾಟಕ ಅರಣ್ಯ ಕಾಯ್ದೆ 1963ರ ಕಲಂ 24(a), (c), (ii), (g), (h) ಉಲ್ಲಂಘನೆ ಯಾಗಿರುವುದರಿಂದ ಚೆಂಬು, ಸಂಪಾಜೆ ಗ್ರಾಮಗಳಲ್ಲಿ ಮೀಸಲು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿರುವ 30 ಪ್ರಕರಣಗಳಲ್ಲಿನ ಒತ್ತುವರಿದಾರರಿಗೆ ಒತ್ತುವರಿಯನ್ನು ತೆರವುಗೊಳಿಸುವಂತೆ 1963 ರ ಅರಣ್ಯ ಕಾಯ್ದೆ ಸೆಕ್ಷನ್ 64 (ಎ) ಪ್ರಕಾರ ನೋಟಿಸುಗಳನ್ನು ಜಾರಿ ಮಾಡಲಾಗಿರುತ್ತದೆ. ಅರಣ್ಯ ಅತಿಕ್ರಮಣ ತೆರವಿಗೆ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 15511 ರಿಂದ 15514/2013 ರಲ್ಲಿ ದಾಖಲಿಸಿದ್ದು ಒತ್ತುವರಿ ತೆರವುಗೊಳಿಸಲು ಸಮಯ ಬದ್ಧ ಕಾರ್ಯಕ್ರಮ ರೂಪಿಸಲು ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ನೀಡಿದ್ದು ಈ ಬಗ್ಗೆ ಇಲಾಖೆಯಿಂದ ಕ್ರಮ ಜರುಗಿಸಲಾಗುತ್ತಿದೆ.

(ಇ) ಸದರಿ ಭೂಮಿಯು ಚೀಪ್ ಕಮಿಷನರ್ ಆಫ್ ಕೂರ್ಗ್ ರವರ ನೋಟಿಫಿಕೇಷನ್ ಸಂಖ್ಯೆ: 40 ದಿನಾಂಕ: 30–5–1904ರ ಪ್ರಕಾರ ಪಟ್ಟಿಘಾಟ್ ಮೀಸಲು ಅರಣ್ಯವೆಂದು ಘೋಷಣೆಯಾಗಿರುತ್ತದೆ. 1999–2000ನೇ ಸಾಲಿನಲ್ಲಿ ಸರ್ವೇ ಆಫ್ ಇಂಡಿಯಾ ರವರ ವತಿಯಿಂದ ಪಟ್ಟಿಘಾಟ್ ಮೀಸಲು ಅರಣ್ಯದ ಹದ್ದುಬಸ್ತು ಸರ್ವೇಕಾರ್ಯ ನಡೆಸಿ ಹದ್ದುಬಸ್ತು ಗುರುತಿಸಲಾಗಿರುತ್ತದೆ.

ಶ್ರೀ ಬೋಪಯ್ಯ ಕೆ.ಜಿ. : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. 4–5 villages ಹೆಸರುಗಳನ್ನು ಸೇರಿಸಿ, 30 ಜನರ ಮೇಲೆ case register ಆಗಿದೆ. ಅವರಿಗೆ ಮಾತ್ರ ನೋಟಿಸ್

ಕೊಟ್ಟಿದೆ ಎಂದು ಹೇಳಿದೆ. ನೀವು ಯಾವಾಗ case register ಮಾಡಿದ್ದೀರಿ, ಆ case ಏನಾಗಿದೆ ಅದರ ಮಾಹಿತಿ ಕೊಡಬೇಕು ಹಾಗೂ ಅವರು ನೋಟಿಸ್ ಕೊಟ್ಟಿದ್ದು, ಅಂದರೆ ಒಂದೇ village ನಲ್ಲಿ ಸುಮಾರು 200 ಜನರಿಗೆ Vague Notice ಕೊಟ್ಟಿದ್ದಾರೆ. ನೀವೆಲ್ಲಾ ಅರಣ್ಯವನ್ನು encroach ಮಾಡಿಬಿಟ್ಟಿದ್ದೀರಿ, ಬಿಟ್ಟು ಹೋಗಿ ಎಂದು ಹೇಳಿದ್ದಾರೆ. ಬಹಳಷ್ಟು ಜನರಿಗೆ ಹಕ್ಕು–ಪತ್ರ ಎಲ್ಲವನ್ನೂ ಕೊಟ್ಟಿದ್ದು ಇದೆ. ಅದು ಯಾವುದೂ ಇವರಿಗೆ ಲೆಕ್ಕಕ್ಕೆ ಇಲ್ಲ. ಇನ್ನು forest ಎಲ್ಲಾ...

ಅಧ್ಯಕ್ಷರು : ಹಕ್ಕು–ಪತ್ರ ಕೊಟ್ಟಿದೆಯೇ ?

ಶ್ರೀ ಬೋಪಯ್ಯ ಕೆ.ಜಿ. : ಹೌದು, ಹಕ್ಕು–ಪತ್ರ ಬಹಳ ಹಿಂದೆ ಅಂದರೆ 50 ವರ್ಷಗಳ ಹಿಂದೆ ಕೊಟ್ಟಿದ್ದು ಇದೆ. ಈಗ ನೋಟಿಸ್ ಕೊಡುತ್ತಿದ್ದಾರೆ. ಆಮೇಲೆ Forest Dwellers Act ನಲ್ಲಿ application ಕೊಟ್ಟಿದ್ದು Still pending ಇದೆ. ಅವರಿಗೂ ನೋಟಿಸ್ ಕೊಟ್ಟಿದ್ದೀರಿ. ಇಲ್ಲಿ 30 ಜನಕ್ಕೆ ಎಂದು ಹೇಳಿದ್ದೀರಿ. ಅದು ಯಾರದು? ಅದು ಯಾವ village, ಏನು ಎಂದು ಹೇಳಬೇಕು. ಇನ್ನೊಂದು ಹೇಳುತ್ತೇನೆ. ದಿನಾಂಕ: 30–05–1904ನಲ್ಲಿ Patti Ghat Reserve Forest ಎಂದು declare ಮಾಡಿದ್ದಾರೆ. Subsequently de-notify ಆಗಿದೆ. ಅದೇ notification ನಲ್ಲಿ ಎಷ್ಟಾಗಿದೆ? ಮಾಹಿತಿ ಕೊಡಿ. ಇಲ್ಲಿ ಏನಾಗಿದೆ ಎಂದರೆ ಯಾರೋ Writ ಹಾಕಿಬಿಡುವುದು. ಎಲ್ಲಾ Forest encroach ಎಂದು ಹೇಳುವುದು. ಅದನ್ನು ಇವರು defend ಮಾಡುವುದಿಲ್ಲ. Writ ಹಾಕಿದವರ ಪರವಾಗಿ ವಾದ ಮಾಡಿ ನಿಮ್ಮ ಅರಣ್ಯ ಇಲಾಖೆಯ ಅಧಿಕಾರಿಗಳು order ಮಾಡಿಸಿಕೊಳ್ಳುತ್ತಾರೆ. ಅದರಿಂದ ಇದೆಲ್ಲಾ ಆಗುತ್ತಿದೆ. ಯಾರು Writ ಹಾಕಿದರು? ನಿಮ್ಮದು ಅದರಲ್ಲಿ ಏನು ವಾದವಿತ್ತು? ಇದರಿಂದಾಗಿ ನಾವು ಯಾರೂ ಕೂಡ ಕಾಡಿನ ಪ್ರದೇಶಕ್ಕೆ ಹೋಗುವುದಕ್ಕೆ ಆಗುತ್ತಿಲ್ಲ.

ಅಧ್ಯಕ್ಷರು : Specific ಆಗಿ ಹೀಗೆ ಹೇಳೋಣ. ಮಾನ್ಯ ಮಂತ್ರಿಗಳೇ, ದಯವಿಟ್ಟು ಈಗ *traditional dwellers and* ಪ್ರಾರಂಭಿಕ ಅರಣ್ಯ ಕಾನೂನು ಇದೆಯೆಲ್ಲಾ ಅದರಲ್ಲಿ ಅವರು ಅರ್ಜಿ ಹಾಕಿದ್ದರೆ, ಈಗ ಎಲ್ಲಾ ಅರ್ಜಿ ಹಾಕಿಕೊಂಡಿದ್ದರೆ ನೀವು eviction ಮಾಡುವುದಕ್ಕೆ ಬರುವುದಿಲ್ಲ. Act ನಲ್ಲಿ specific provision ಮಾಡಿದ್ದರೆ ಈ ನಿಮ್ಮ ಆಫೀಸ್ ಅನ್ನು prosecute ಮಾಡುವುದಕ್ಕೆ ಅವಕಾಶವಿದೆ. ಈಗ ಅದೆಲ್ಲಾ process ಆಗುವವರೆಗೆ ಏಕೆ ಇದನ್ನು ನೀವು initiate ಮಾಡುತ್ತೀರಿ ? Act ಬಂದಿದೆ, ಅವಕಾಶವಿದೆ. ನೀವೇ ಮೊನ್ನೆ 38ರ enquiry application ಗೆ application ಹಾಕಿಕೊಳ್ಳುವುದಕ್ಕೆ ಎಂದು circular ಕಳುಹಿಸಿದ್ದೀರಿ.

ಶ್ರೀ ಬಿ. ರಮಾನಾಥ ರೈ : ಹೌದು, ಈಗ ಅರಣ್ಯ ಹಕ್ಕುಗಳ ಕಾಯ್ದೆ ಪ್ರಕಾರ ಅದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ನಾವು ಈಗಾಗಲೇ ಎಲ್ಲಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ಮಾಡಿದ್ದೇವೆ.

ಶ್ರೀ ಬೋಪಯ್ಯ ಕೆ.ಜಿ. : ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡೋಣ.

ಅಧ್ಯಕ್ಷರು : ಈಗ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ. ಏನಾಗಿದೆ ಎಂದರೆ, ಪ್ರತಿಯೊಂದು ಗ್ರಾಮಕ್ಕೂ ಅರಣ್ಯ ಹಕ್ಕು ಸಮಿತಿ ಮಾಡಿದ್ದಾರೆ. ಅದನ್ನು ಮಾಡುವಂತಹ ಸಂದರ್ಭದಲ್ಲಿ ಸ್ವಲ್ಪ ಆಲೋಚನೆ ಮಾಡಬೇಕು. ಸುಮ್ಮನೆ ಕುಳಿತುಕೊಂಡು ಏನೋ ಇರಬಹುದು ಎಂದು ಮಾಡಿಬಿಟ್ಟಿದ್ದಾರೆ. ಅವರುಗಳಿಗೆ ಏನೂ ಗೊತ್ತಾಗುವುದಿಲ್ಲ.

ಅದು ಟ್ರೈಬಲ್ ಅವರಿಗೆ ಬರುತ್ತದೆ ಅವರು circular ಕೊಟ್ಟಿದ್ದಾರೆ. ಅರ್ಜಿಯನ್ನು ಹಾಕುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ಅರ್ಜಿಯನ್ನು ಹಾಕಿಕೊಂಡರೆ ಅದು ಇತ್ಯರ್ಥವಾಗುವವರೆಗೆ ಯಾರೂ eviction ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಬಿ.ರಮಾನಾಥ ರೈ. : ಅರಣ್ಯ ವಾಸಿಗಳು ಯಾರಿದ್ದಾರೆ ಅವರಿಗೆ ಅವಕಾಶವಾಗಬೇಕೆಂಬ ದೃಷ್ಟಿಯಿಂದ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ನಾಲ್ಕು ಬಾರಿ Cabinet Sub Committee ಸೇರಿ ತೀರ್ಮಾನ ಮಾಡಿ ಮತ್ತೊಮ್ಮೆ ಅರ್ಜಿ ತೆಗೆದುಕೊಂಡು ಪುನರ್ ಪರಿಶೀಲನೆ ಮಾಡಿ ಅರಣ್ಯ ಹಕ್ಕುಗಳ ಕಾಯಿದೆಯೊಳಗೆ ಮಾಡಿದ್ದೇವೆ. ಏಕೆಂದರೆ ಆಂಧ್ರ ಪ್ರದೇಶದಲ್ಲಿ ಮಹತ್ವಾಕಾಂಕ್ಷೆಯ ಅರಣ್ಯ ಹಕ್ಕುಗಳ ಕಾಯಿದೆಯಡಿಯಲ್ಲಿ 80% ಅರಣ್ಯ ವಾಸಿಗಳ ಪರವಾಗಿ ಆಗಿದೆ. ಕಳೆದ 2, 3, 4 ವರ್ಷಗಳಲ್ಲಿ 16% ಮಾತ್ರ ಆಗಿದೆ. ಅದನ್ನು ಗಮನಿಸಿ ಅರಣ್ಯ ಹಕ್ಕುಗಳ ಕಾಯಿದೆಯಲ್ಲಿ ಸಾಕಷ್ಟು ಜನರಿಗೆ ಅನುಕೂಲವಾಗಬೇಕೆಂಬ ದೃಷ್ಟಿಯಿಂದ ಇದನ್ನು ಮಾಡಿದ್ದೇವೆ. ಭೂ ಸುಧಾರಣೆ ಕಾಯಿದೆ ಗೇಣಿದಾರರ ಪರವಾಗಿದೆ. ಅದೇ ರೀತಿ ಈ ಕಾಯಿದೆ ಕೂಡ ಅರಣ್ಯವಾಸಿಗಳ ಪರವಾಗಿದೆಯೆಂದು ತಿಳಿದು ಎಲ್ಲಾ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ನೋಡಲ್ ಏಜೆನ್ಸಿಯಾಗಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಕಂದಾಯ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆ ಎಲ್ಲಾ ಜಿಲ್ಲೆಯಲ್ಲಿ ಸಮಿತಿಯನ್ನು ಮಾಡಿದ್ದೇವೆ. ಈ ಸಂಬಂಧ ಈಗಾಗಲೇ ಪರಿಶೀಲನೆ ನಡೆಯುವ ಕಾರ್ಯಕ್ರಮ ಪ್ರಾರಂಭವಾಗಿದೆ. ಪಾರಂಪರಿಕವಾಗಿ ಮೂರು ತಲೆಮಾರುಗಳಿಂದ ಸಾಕಷ್ಟು ಸಂಖ್ಯೆಯಲ್ಲಿ ಇರುವ ರೈತರಿಗೆ ಮತ್ತು ಟ್ರೈಬ್ಸ್ ಏನಿದೆ ಅವರಿಗೆ ಅವಕಾಶ ಮಾಡಿಕೊಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದೇವೆ.

ಅಧ್ಯಕ್ಷರು : ಅವರಿಗೆ ಕೊಟ್ಟಿರುವ ನೋಟಿಸ್ ಅನ್ನು ವಾಪಸ್ಸು ತೆಗೆದುಕೊಳ್ಳಿ ಎಂಬುದು ಬೋಪಯ್ಯರವರ concern ಆಗಿದೆ.

ಶ್ರೀ ಕೆ.ಜಿ.ಬೋಪಯ್ಯ : 30 ಜನರ ಮೇಲೆ ಯಾರು, ಯಾವಾಗ ಕೇಸ್ ಹಾಕಿದ್ದಾರೆಂದು specific ಆಗಿ ಕೇಳಿದ್ದೇನೆ. ಆದರೆ ಇವರ ಬಳಿ ಈ ಪ್ರಶ್ನೆಗೆ ಉತ್ತರವಿಲ್ಲ.

ಶ್ರೀ ಬಿ.ರಮಾನಾಥ ರೈ : 1978ರ ನಂತರ ಯಾವ ಜಮೀನು ಅತಿಕ್ರಮಣವಾಗಿದೆ ಅದು ಸುಪ್ರೀಂ ಕೋರ್ಟ್‌ನ ಆದೇಶದ ಪ್ರಕಾರ ಕಾನೂನು ಉಲ್ಲಂಘನೆಯಾಗುತ್ತದೆ. ಅದಕ್ಕೆ ನೋಟಿಸ್ ಕೊಟ್ಟಿದ್ದೇವೆ.

ಅಧ್ಯಕ್ಷರು : ಈ ಸದನಗಳು, ಲೋಕಸಭೆಗಳು ಕಾನೂನು ಮಾಡುವ ಸಂಸ್ಥೆಗಳು ನಮಗೆ ನಮ್ಮದೇ ಆದ jurisdiction ಇದೆ. Supreme Court and High Court ಗೆ ಅವರದೇ ಆದ jurisdiction ಇದೆ.

ಶ್ರೀ ಕೆ.ಜಿ.ಬೋಪಯ್ಯ : ಇಲ್ಲಿ ನಿರ್ಣಯ ಮಾಡಿದರೆ ಅದಕ್ಕೆ ಗೌರವವಿಲ್ಲ.

ಶ್ರೀ ಬಿ.ರಮಾನಾಥ ರೈ : ನಮ್ಮ ಸರ್ಕಾರ ಬಂದ ನಂತರ Deemed Forest ಅನ್ನು ಕೂಡ ಸಮೀಕ್ಷೆ ಮಾಡಿದೆ. ಈ ಸಮಸ್ಯೆ ಬಹಳ ವರ್ಷಗಳಿಂದ ಇದೆ. Deemed Forest C and D ಜಾಗವನ್ನು ಅರಣ್ಯಕ್ಕೆ ಕೊಟ್ಟಿರುವುದನ್ನು ವಿರಹಿತ ಮಾಡಬೇಕೆಂಬ ದೃಷ್ಟಿಯಿಂದ ಜಂಟಿ ಸರ್ವೆ ಮಾಡುವುದಕ್ಕೆ ಕ್ಯಾಬಿನೆಟ್‌ನಲ್ಲಿ ಒಪ್ಪಿಗೆ ಪಡೆದು ಆರು ತಿಂಗಳ ಒಳಗೆ ರಾಜ್ಯದ ಎಲ್ಲಾ ಭಾಗದಲ್ಲಿ ಕಂದಾಯ ಮತ್ತು ಅರಣ್ಯ ಇಲಾಖೆ ಮಧ್ಯದಲ್ಲಿರುವ demarcation ಮಾಡುವಂತಹದ್ದು ಮತ್ತು ನಮಗೆ ಕೊಟ್ಟಿರುವ ಜಮೀನನ್ನು ವಾಪಸ್ಸು ಕಂದಾಯ ಇಲಾಖೆಗೆ ಕೊಡುವುದಕ್ಕೆ ನಾವು ಸುಪ್ರೀಂ ಕೋರ್ಟ್‌ಗೆ affidavit ಮಾಡಬೇಕೆಂಬ ದೊಡ್ಡ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. 1978ರ ಹಿಂದೆ ಅತಿಕ್ರಮಣವಾಗಿರುವುದಕ್ಕೆ ನಾವು ಯಾವ ತೊಂದರೆಯನ್ನೂ ಮಾಡುವುದಿಲ್ಲ. ಬಹುಶಃ ಅದರಲ್ಲಿ ಅವಕಾಶಗಳಿವೆ. ನಿರ್ದಿಷ್ಟವಾಗಿ ಸಣ್ಣ ಹಿಡುವಳಿದಾರರನ್ನು ರಕ್ಷಣೆ ಮಾಡುವ ದೃಷ್ಟಿಯಿಂದ ನಾವು ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದೇವೆ. ನಂತರದ ಅತಿಕ್ರಮಣವಾಗಿರುವುದನ್ನು ಅನಿವಾರ್ಯವಾಗಿ ಏನೂ ಮಾಡುವುದಕ್ಕಾಗುವುದಿಲ್ಲ. ನೋಟಿಸ್ ಮಾತ್ರ ಕೊಟ್ಟಿದ್ದಾರೆ. ಅದನ್ನು ಪರಿಶೀಲಿಸಿ ನ್ಯಾಯಸಮ್ಮತವಾಗಿದ್ದರೆ ಅದರ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು : ಒಂದು circular ಅನ್ನು ಕಳುಹಿಸಿ ನೀವು ಜಿಲ್ಲಾ ಮಟ್ಟದ ಮತ್ತು ರಾಜ್ಯ ಮಟ್ಟದ ಸಮಿತಿಯನ್ನು ಮಾಡಿದ್ದೀರಿ. ಆ ಜಿಲ್ಲಾ ಮಟ್ಟದ ಸಮಿತಿ ಮುಂದೆ ಸಾರ್ವಜನಿಕರು . . .

ಶ್ರೀ ಬಿ.ರಮಾನಾಥ ರೈ : ಅರಣ್ಯ ಹಕ್ಕು ಕಾಯಿದೆಯಲ್ಲೂ ಕೂಡ ಸಮಿತಿ ಮಾಡಿದ್ದೇವೆ. Deemed Forest ನಲ್ಲಿ ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆಯನ್ನು bifurcation ಮಾಡಿ ಮತ್ತೆ ಕಂದಾಯ ಇಲಾಖೆ ಕೊಡುವುದಕ್ಕೆ affidavit ಕೊಡುವುದಕ್ಕೆ ತೀರ್ಮಾನ ಮಾಡಿದ್ದು, ಸರ್ವೆ ಕಾರ್ಯ ಪ್ರಾರಂಭವಾಗಿದೆ.

ಶ್ರೀ ಡಿ.ಎನ್. ಜೀವರಾಜ್ : ಯಾರನ್ನೂ ನಾವು ತೆಗೆಯುತ್ತಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಅವರಿಗೆ ಮಾಹಿತಿ ಇದೆಯೋ ಇಲ್ಲವೋ ಗೊತ್ತಿಲ್ಲ. 1978ಕ್ಕಿಂತ ಹಿಂದೆ ಜಮೀನು ಮಾಡಿದ್ದ ಸಣ್ಣ ರೈತರನ್ನು ಕೂಡ ಒಕ್ಕಲೆಬ್ಬಿಸುತ್ತಿದ್ದಾರೆ, ಕೇವಲ ನೋಟಿಸ್ ಮಾತ್ರ ಕೊಡುತ್ತಿಲ್ಲ. ಈ ಸಂಬಂಧ ಮಾಹಿತಿ ಬೇಕಾದರೆ ತರಿಸಿಕೊಳ್ಳಿ. ನೀವು ತಪ್ಪು ಮಾಹಿತಿ ಹೇಳುತ್ತಿದ್ದೀರಿ. ಸತ್ಯವಾಗಿಯೂ ತಪ್ಪು ಹೇಳುತ್ತಿದ್ದಾರೆ ಸರ್.

ಅಧ್ಯಕ್ಷರು : ಅರಣ್ಯ ಪ್ರದೇಶದಿಂದ ಬಂದಿರುವ ನಾವೆಲ್ಲಾ ಒಟ್ಟಿಗೆ ಸೇರಿಕೊಂಡು ಒಂದು ತೀರ್ಮಾನವನ್ನು ಮಾಡೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಹಿಂದೆ ಕೂಡ ಇದನ್ನು ಹೇಳಿದ್ದೀರಿ. ಅವರು ಮಾಡುತ್ತಿಲ್ಲ.

ಶ್ರೀ ಆರ್. ನರೇಂದ್ರ : ನನ್ನ ಮತಕ್ಷೇತ್ರದಲ್ಲಿ 50-60 ವರ್ಷದಿಂದ ಜಮೀನು ಮಾಡುತ್ತಿರುವವರಿಗೂ ಕೂಡ ಇನ್ನೊಂದು ವಾರದೊಳಗೆ ಖಾಲಿ ಮಾಡಬೇಕೆಂದು ನೋಟಿಸ್ issue ಮಾಡಿದ್ದಾರೆ.

ಅಧ್ಯಕ್ಷರು : ಷೆಡ್ಯೂಲ್ಡ್ ಟ್ರೈಬ್ಸ್ ನಿಂದ ಪ್ರಾರಂಭಿಕ ಅರಣ್ಯ ಹಕ್ಕು ಕಾನೂನಿನ ಪ್ರಕಾರ ಅರಣ್ಯ ಹಕ್ಕು ಸಮಿತಿಗೆ ನೀವು ಒಂದು ಅರ್ಜಿಯನ್ನು ಕೊಟ್ಟು endorsement ತೆಗೆದುಕೊಳ್ಳಿ. ಅದರ ವಿರುದ್ಧ ಯಾರು prosecution ಮಾಡುತ್ತಾರೆ ಅಲ್ಲಿಗೆ ನಾನು ಬರುತ್ತೇನೆ. ಕಾನೂನಿದೆ, ಆದರೆ ಏಕೆ ನೀವ್ಯಾರೂ ಆ ರೀತಿ ಮಾಡುತ್ತಿಲ್ಲ ?

ಶ್ರೀ ಆರ್.ನರೇಂದ್ರ : ಅರ್ಜಿ pending ಇದ್ದು, ಇನ್ನೂ ತೀರ್ಮಾನವಾಗಿಲ್ಲ. ಆದರೂ ಕೂಡ ನೋಟಿಸ್ ಕೊಟ್ಟಿದ್ದಾರೆ.

ಶ್ರೀ ಕೆ.ಜಿ.ಬೋಪಯ್ಯ: ನಮ್ಮ ಆಪಾದನೆ ಕೂಡ ಅದೇ ಆಗಿದೆ. ಅರ್ಜಿ pending ಇದ್ದವರಿಗೆ ನೋಟಿಸ್ ಕೊಟ್ಟಿದ್ದೀರಿ.

ಅಧ್ಯಕ್ಷರು : ಅರ್ಜಿ ಕೊಟ್ಟು ತೀರ್ಮಾನವಾಗುವವರೆಗೆ ಯಾರಾದರೂ eviction ಮಾಡುವುದಕ್ಕೆ ನೋಟಿಸ್ ಕೊಟ್ಟಿದ್ದರೆ ಅವರ ವಿರುದ್ಧವಾಗಿ ನೀವು police complaint ಕೊಡಬಹುದೆಂದು ಕಾನೂನಿನಲ್ಲಿ ಒಂದು provision ಮಾಡಿದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ : ಇವರು ಇಲ್ಲಿ ಕೊಟ್ಟಿರುವುದೇನೆಂದರೆ 30 ಜನರಿಗೆ ಮಾತ್ರ ನೋಟಿಸ್ ಅವರ ಮೇಲೆ FIR ಆಗಿದೆ, Forest Act ಪ್ರಕಾರ ಕೇಸ್ register ಮಾಡಿದೆ.

ಇದನ್ನು ಯಾವಾಗ ಮಾಡಿದ್ದು, ಇದು ಯಾವ ಕೇಸ್ ಎಂಬ ಬಗ್ಗೆ ಮಾಹಿತಿ ಕೊಡಿ. ಎರಡನೇ clarification ಏನೆಂದರೆ, "The said land has been declared as Patti Ghat reserved forest vide Notification 40 dated: 30-05-1904 of Chief Commissioner of Coorg". In 1999-2000, Survey Work has been conducted through the Survey of India and Boundaris ಎಂದು ಇವರು ಸುಳ್ಳನ್ನು ಹೇಳಿದ್ದು, ಯಾವ ಬೌಂಡರಿ ಕೂಡ ಅಲ್ಲಿ ಫಿಕ್ಸ್ ಆಗಿಲ್ಲ. ಆಮೇಲೆ, 1904 Notification ಆದ ನಂತರ ಸಾಕಷ್ಟು ಲ್ಯಾಂಡ್‌ಗಳು de-notify ಆಗಿದೆ. Forest ನಿಂದ delete ಮಾಡಿದ್ದಾರೆ. ಈ ಬಗ್ಗೆ ಮಾಹಿತಿ ಕೊಡಿ. ಇಡೀ ಊರೇ ಫಾರೆಸ್ಟ್ ಎಂದು ಹೇಳಿದ್ದಾರೆ.

ಶ್ರೀ ಬಿ.ರಮಾನಾಥ ರೈ : ಮಾನ್ಯ ಅಧ್ಯಕ್ಷರೆ ಎಲ್ಲವನ್ನೂ ಫಾರೆಸ್ಟ್ ಎಂದು ಹೇಳುವುದಕ್ಕಾಗುವುದಿಲ್ಲ. Deemed forest ಅನ್ನು ವಿರಹಿತ ಮಾಡುವ ಒಂದು ಕೆಲಸ, ಇದು ನಿನ್ನೆ ಮೊನ್ನೆಯ ಸಮಸ್ಯೆಯಲ್ಲ. ಇದು ಎಷ್ಟೋ ವರ್ಷಗಳ ಸಮಸ್ಯೆಯಾಗಿದೆ ಬೋಪಯ್ಯನವರು ಕೂಡ ಅಧಿಕಾರ ಮಾಡಿದ್ದಾರೆ.

ಶ್ರೀ ಕೆ.ಜಿ. ಬೋಪಯ್ಯ : ನಾನು ಅಧಿಕಾರ ಮಾಡಿಲ್ಲ. ನಾನು ಅಧಿಕಾರ ಮಾಡಿದ್ದರೆ ಈ ರೀತಿ ಆಗುತ್ತಿರಲಿಲ್ಲ.

ಶ್ರೀ ಬಿ.ರಮಾನಾಥ ರೈ : Deemed forest ಸರಿಪಡಿಸುವುದಕ್ಕೆ ನಾವು ಕ್ರಮ ಕೈಗೊಳ್ಳುತ್ತೇವೆ. ಆದರೆ de-notify ಆಗಿರುವುದಕ್ಕೂ ಕೂಡ ನೋಟಿಸ್ ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಅದನ್ನು ಪರಿಶೀಲನೆ ಮಾಡಿ ಆ ರೀತಿ ಇದ್ದರೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಕೆ.ಜಿ.ಬೋಪಯ್ಯ : ನೀವು ಪರಿಶೀಲನೆ ಮಾಡುವುದಲ್ಲ. ಅರಣ್ಯ ಇಲಾಖೆ, ಅರಣ್ಯ ಭವನದಲ್ಲಿ ಕುಳಿತಿರುವವರ ಮೇಲೆ ಕ್ರಮ ಕೈಗೊಳ್ಳಬೇಕು. ಈಗ ನೋಟಿಸ್, Suo-motu ಕೊಡುತ್ತೀರಿ.

ಶ್ರೀ ಬಿ.ರಮಾನಾಥ ರೈ : ನೋಟಿಸ್ ಕೊಟ್ಟಿರುವುದು 1978 ರ ನಂತರ ಅತಿಕ್ರಮಣ ಮಾಡಿರುವುದಕ್ಕೇ ಹೊರತು ಅದಕ್ಕೂ ಮೊದಲಿನದಕ್ಕಲ್ಲ.

ಶ್ರೀ ಕೆ.ಜಿ.ಬೋಪಯ್ಯ : ಈಗ 30 ಜನರಿಗೆ ಕೊಟ್ಟಿದ್ದೀರಲ್ಲ, ಅದಕ್ಕೆ ಮಾಹಿತಿ ಕೊಡಿ.

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಮಂತ್ರಿಗಳು ತಪ್ಪು ಹೇಳುತ್ತಿದ್ದಾರೆ. 1978ರ ನಂತರ ಅಲ್ಲಾ. ನಾವು ಹುಟ್ಟುವುದಕ್ಕಿಂತ ಮುಂಚೆ ಇದ್ದವಕ್ಕೆಲ್ಲಾ ನೋಟಿಸ್ ಕೊಟ್ಟಿದ್ದಾರೆ. ಮಾನ್ಯ ಮಂತ್ರಿಗಳು ಈ ರೀತಿ ಹೇಳಿದರೆ ಹೇಗೆ ? ನೀವು ಈ ರೀತಿ ಹೇಳಬಾರದು.

ಶ್ರೀ ಕೆ.ಜೆ.ಬೋಪಯ್ಯ : ಅಧಿಕಾರಿಗಳ ಮಾತನ್ನು ಕೇಳಿಕೊಂಡು ಉತ್ತರ ಹೇಳಬೇಡಿ. ವಾಸ್ತವಾಂಶ ತಿಳಿದುಕೊಂಡು ಹೇಳಿ.

(ಗೊಂದಲ)

ಶ್ರೀ ಡಿ.ಎನ್.ಜೀವರಾಜ್ : ಮಾನ್ಯ ಮಂತ್ರಿಗಳು ಅಧಿಕಾರಿಗಳ ಮಾತನ್ನು ಕೇಳಿಕೊಂಡು ಉತ್ತರ ಕೊಡುತ್ತಿದ್ದಾರೆ.

(ಗೊಂದಲ)

ಶ್ರೀ ಬಿ.ರಮಾನಾಥ ರೈ : ಈ ಸಮಸ್ಯೆ ಇವತ್ತಿನದಲ್ಲ. ನೀವು ಇದ್ದಾಗ ಕೂಡ ಈ ಸಮಸ್ಯೆಯಿದ್ದು ಏಕೆ ಪರಿಹಾರ ಸಿಕ್ಕಿಲ್ಲ?

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಸ್ವಲ್ಪ ಸಮಾಧಾನ ತಂದುಕೊಳ್ಳಿ. ನಾನೊಂದು ವಿಷಯವನ್ನು ಹೇಳುತ್ತೇನೆ ಕೇಳಿ.

(ಗೊಂದಲ)

ಶ್ರೀ ಕೆ.ಜೆ.ಬೋಪಯ್ಯ : ಈ ಸಮಸ್ಯೆಯನ್ನು ಕಡಿಮೆ ಮಾಡಬೇಕೇ ಹೊರತು ಜಾಸ್ತಿ ಮಾಡಬಾರದು. ಇದು ನಮ್ಮ ಜೀವನದ ಪ್ರಶ್ನೆಯಾಗಿದೆ. ಇವರ ಪ್ರಕಾರ ನಾವು ಅರಣ್ಯವನ್ನು ಉಳಿಸಿದ್ದೇ ತಪ್ಪು ಎನ್ನುವ ರೀತಿ ಆಯಿತು.

(ಗೊಂದಲ)

ಅಧ್ಯಕ್ಷರು : ಅವರೇನೋ ಹೇಳುತ್ತಾರೆ ಬಿಡಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಧಿಕಾರಿಗಳು ಇವರ ಮಾತನ್ನು ಕೇಳುವುದಿಲ್ಲ.

ಅಧ್ಯಕ್ಷರು : ನಾವು ಮತ್ತು ನೀವು ಜನರನ್ನು ಪ್ರತಿನಿಧಿಸುವ ವ್ಯಕ್ತಿಗಳಾಗಿದ್ದೇವೆ. ಅವರ ಪ್ರತಿನಿಧಿಯಾಗಿ ಇಲ್ಲಿ ಬಂದಿದ್ದೇವೆ. ಜನರ ಸಮಸ್ಯೆಗೆ ಸ್ಪಂದಿಸೋಣ. ನಮ್ಮ ಅಧಿಕಾರಿಗಳು ನಾವೇನು ಕಾನೂನು ಮಾಡುತ್ತೇವೋ ಅದನ್ನು implement ಮಾಡುತ್ತಾರೆ. ಕಾನೂನಿನಲ್ಲಿ misinterpret ಮಾಡುವುದಕ್ಕೆ ಅವಕಾಶವಿರುವ ಕಾರಣ ಈ ಎಲ್ಲಾ ಗೊಂದಲಗಳು ಸೃಷ್ಟಿಯಾಗಿವೆ.

ಶ್ರೀ ಬಿ.ರಮಾನಾಥ ರೈ : 1978ಕ್ಕಿಂತ ಮೊದಲು ಮೂರು ಎಕರೆಗಿಂತ ಕಡಿಮೆ ಜಮೀನಿರುವ ಸಣ್ಣ ಹಿಡುವಳಿದಾರರು ಹಕ್ಕುಪತ್ರ ಪಡೆದಿದ್ದರೆ ಅವರಿಗೂ ಕೂಡ ಏನಾದರೊಂದು ಕ್ರಮ ಕೈಗೊಳ್ಳಬೇಕೆಂಬ

ಆಲೋಚನೆಯಲ್ಲಿದ್ದೇವೆ. ಅಂದರೆ ದೊಡ್ಡ ಒತ್ತುವರಿದಾರರಿಗಲ್ಲ. ಎಷ್ಟೋ ವರ್ಷಗಳಿಂದ deemed forest ಸಮಸ್ಯೆಯಿತ್ತು. ಅದಕ್ಕೆ ಪರಿಹಾರ ಮಾಡಬೇಕೆಂಬ ಪ್ರಯತ್ನದಲ್ಲಿದ್ದೇವೆ. ಅರಣ್ಯ ಹಕ್ಕು ಕಾಯಿದೆ ಬಂತು. ನಮ್ಮ ರಾಜ್ಯದಲ್ಲಿ 16% ಮಾತ್ರ ಅರಣ್ಯ ವಾಸಿಗಳ ಪರವಾಗಿ ತೀರ್ಮಾನವಾಗಿದೆ. ನಾನು ರೆಕಾರ್ಡ್ ಬೇಕಾದರೆ ತೋರಿಸುತ್ತೇನೆ.

ಶ್ರೀ ಕೆ.ಜಿ.ಬೋಪಯ್ಯ : ನಿಮ್ಮ Deemed Forest list ಅನ್ನು ಒಂದು ಸಲ ನೋಡಿ ಇವರ Deemed Forest list ಅನ್ನು ಒಂದು ಸಲ ನೋಡಿದರೆ ಬೇರೆ ಲ್ಯಾಂಡ್ ಇಲ್ಲ.

ಶ್ರೀ ಬಿ.ರಮಾನಾಥ ರೈ : ಅರಣ್ಯ ಹಕ್ಕು ಕಾಯಿದೆಯಲ್ಲಿ ಸಾಕಷ್ಟು ಅರಣ್ಯವನ್ನು ಅರಣ್ಯ ವಾಸಿಗಳ ಪರವಾಗಿ ಕೊಡಬೇಕೆಂದು ನಾವು ನಿರ್ಣಯ ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಬೋಪಯ್ಯನವರೇ, ತಾವು ಕುಳಿತುಕೊಳ್ಳಿ. ಈಗ ಅವರು ಒಂದು ಕಮಿಟಿ ಮಾಡಿದ್ದಾರೆ. ನನ್ನ ವಿನಂತಿ ಏನೆಂದರೆ ಸಾರ್ವಜನಿಕರು ಕಮಿಟಿ ಮುಂದೆ ಹೋಗಿ ಅವರು ಮನವಿ ಕೊಡಲು ಒಂದು ಅವಕಾಶ ಮಾಡಿಕೊಡಿ ಎಂದು ಹೇಳೋಣವೆಂದು ಇದ್ದೇನೆ. ಅದನ್ನು consider ಮಾಡಬೇಕು.

ಶ್ರೀ ಬಿ.ರಮಾನಾಥ ರೈ : ನಾವು ಕೇವಲ ಭರವಸೆಯನ್ನು ಮಾತ್ರ ಕೊಟ್ಟಿರುವುದಿಲ್ಲ. ನಾವು ಈಗಾಗಲೇ ಸಮಿತಿಯನ್ನು ರಚನೆ ಮಾಡಿದ್ದೇವೆ. ತಾವು ಏನು ನಮಗೆ ಸಲಹೆ ಕೊಟ್ಟಿದ್ದೀರಿ ಅದನ್ನು ನಾವು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ತಾವು ಆದಷ್ಟು ಬೇಗನೆ ಸಮಸ್ಯೆಯನ್ನು ಬಗೆಹರಿಸಬೇಕು.

(ಗೊಂದಲ)

ಶ್ರೀ ಬಿ.ರಮಾನಾಥ ರೈ : ಅರಣ್ಯ ಇಲಾಖೆಯು ಕೊಟ್ಟಿರುವಂತ C&D ಜಾಗವನ್ನು ನಾವು ಮತ್ತೆ ಕಂದಾಯ ಇಲಾಖೆಗೆ ಕೊಡುವಂಥ ಮಹತ್ವದ ನಿರ್ಣಯವನ್ನು ತೆಗೆದುಕೊಂಡಿದ್ದೇವೆ, ಸುಪ್ರೀಂ ಕೋರ್ಟ್‌ಗೆ affidavit ಕೊಡುವಂಥ ಮಹತ್ವ ತೀರ್ಮಾನ ಮಾಡಿದ್ದೇವೆ.

ಶ್ರೀ ಕೆ.ಜಿ.ಬೋಪಯ್ಯ : ನೋಟಿಫಿಕೇಷನ್‌ನಲ್ಲಿ ಅದು ಇಲ್ಲ. Notification ನಲ್ಲಿ deemed forest ಎಂದು ಹೇಳಿದ್ದಾರೆ.

ಅಧ್ಯಕ್ಷರು : ಮಾನ್ಯ ಬೋಪಯ್ಯನವರೇ, ತಪ್ಪುಗಾರರು ನಾವೇ ಆಗಿದ್ದೇವೆ. ನೀವೂ ಆಗಿದ್ದೀರಿ. Deemed forest ಎಂದು ಆಗಿ ಹೋಗಿದೆ. ಕಣ್ಣು ಮುಚ್ಚಿಕೊಂಡು ಆಗಿ ಹೋಗಿದೆ.

ಕೆ.ಜಿ.ಬೋಪಯ್ಯ : ಅಧ್ಯಕ್ಷರೆ, ಆ ರೀತಿ ಆಗಿಲ್ಲ. ಇವರೇ self-declaration ಮಾಡಿಕೊಂಡಿದ್ದಾರೆ. ಇಲ್ಲಿ ಲಿಸ್ಟ್ ಇದೆ ಅದನ್ನು ನಾನು ಓದುತ್ತೇನೆ. Proposed under Section 4 of Betta land (Baane),ಕೊಡಗಿನಲ್ಲಿ 36 ಬಗೆಯ ಬಾಣೆಯಿದೆ. ಬಾಣೆ ಎಂದರೆ, ಅದು ಏನು ಬಾಣೆ? ಈ ತರಹ vague ಉತ್ತರವನ್ನು ಕೊಟ್ಟರೆ ಹೇಗೆ?

ಶ್ರೀ ಡಿ.ಎನ್.ಜೀವರಾಜ್ : ಇದನ್ನು ಅರ್ಧ ಗಂಟೆ ಚರ್ಚೆಗೆ ಹಾಕಿ.

(ಗೊಂದಲ)

ಶ್ರೀ ಬಿ.ರಮಾನಾಥ ರೈ : ನಾವು ಎಲ್ಲಾ ಸಮಿತಿಗಳನ್ನು ರಚನೆ ಮಾಡಿದ್ದೇವೆ. ಇನ್ನು ಆರು ತಿಂಗಳೊಳಗೆ ಎಲ್ಲವನ್ನು affidavit ಮಾಡುತ್ತೇವೆ. ಅಧ್ಯಕ್ಷರೆ, ಇದು ಒಂದು ದೊಡ್ಡ ತೀರ್ಮಾನವಲ್ಲವೇ?

ಶ್ರೀ ಕೆ.ಜಿ.ಬೋಪಯ್ಯ : 15–05–2014ರ ನಿಮ್ಮ ನೋಟಿಫಿಕೇಷನ್‌ನಲ್ಲಿ ಅದು ಇಲ್ಲ.

ಅಧ್ಯಕ್ಷರು : ಇದನ್ನು ಚರ್ಚೆಗೆ ಹಾಕೋಣ.

ಶ್ರೀ ಕೆ.ಜಿ.ಬೋಪಯ್ಯ : ತಾವು ಎಲ್ಲಿ ತಪ್ಪಿದ್ದೀರಿ ಎಂದು ಚರ್ಚೆಯಲ್ಲಿ ನಾನು ಉತ್ತರ ಕೊಡುತ್ತೇನೆ.

ಶ್ರೀ ಬಿ.ರಮಾನಾಥ ರೈ : ಸನ್ಮಾನ್ಯ ಗೌರವಾನ್ವಿತ ಸದಸ್ಯರೇ ನಾವು ಮಹತ್ವದ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಯಾವ C & D ಜಾಗವಿದೆ, ಯಾವ deemed forest ಇದೆ ಅದು ಕಾಣೆ ಇರಬಹುದು, ಬಾಣೆ ಇರಬಹುದು, ಕುಮುಚಿ ಇರಬಹುದು, ಬಗರ್‌ಹುಕುಂನಲ್ಲಿ ಮಂಜೂರಾತಿಯಾಗಿರುವಂಥದ್ದು ಆಗಿರಬಹುದು ಎಲ್ಲವನ್ನೂ ವಿರಹಿತ ಮಾಡುವಂಥ ಪ್ರಕ್ರಿಯೆಯನ್ನು ನಾವು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಅದಕ್ಕೆ ಸರ್ವೆ ಕಾರ್ಯ ಆಗುತ್ತಿದೆ. ಇದೊಂದು ಮಹತ್ವದ ಕಾರ್ಯಕ್ರಮವೆಂದು ನಾನು ಭಾವಿಸಿಕೊಂಡಿದ್ದೇನೆ.

10(72) ಅಕ್ರಮ ಸಕ್ರಮ ಪ್ರಕರಣದಲ್ಲಿ ಕ್ರಮ ಕೈಗೊಳ್ಳದೇ ಇರುವುದು.

ಅಧ್ಯಕ್ಷರು : ಅವರು ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ವಿ.ಸುನೀಲ್‌ಕುಮಾರ್ : ಇದು ಪಾಲಿಸಿ matter ಆಗಿದೆ. ಅದರಲ್ಲಿ ಕಾಲಾವಕಾಶವಿಲ್ಲ.

ಶ್ರೀ ಸಿ.ಟಿ.ರವಿ : ಅದೊಂದು ಕಾಯಿಲೆಯಾಗಿದೆ. ಈ ಕಾಲು hour ನಲ್ಲಿ ಕಾಲಾವಕಾಶ ಕೇಳುವುದು ಅಧಿಕಾರಿಗಳ ಕಾಯಿಲೆಯಾಗಿದೆ.

ಶ್ರೀ ವಿ.ಸುನೀಲ್‌ಕುಮಾರ್ : ಇದು ಕಳೆದ ಅಧಿವೇಶನದಲ್ಲಿ ಕೇಳಿದ ಪ್ರಶ್ನೆ ಆಗಿದೆ. ಅದಕ್ಕೆ ಇದುವರೆಗೆ ಉತ್ತರ ಬಂದಿಲ್ಲ. ಮತ್ತೆ ಕಾಲಾವಕಾಶ ಕೇಳಿದರೆ ಹೇಗೆ ?

(ಗೊಂದಲ)